# ನಾ ಕಂಡ ತೀರ್ಥಕ್ಷೇತ್ರಗಳು

**ಸ್ವಾಮಿ ಧರ್ಮವ್ರತಾನಂದ**

*ಯಾತ್ರೆ, ತೀರ್ಥಕ್ಷೇತ್ರಗಳ ಸಂದರ್ಶನವೆಂದರೆ ಹಿಮಾಲಯಕ್ಕೋ ಉತ್ತರಾಖಂಡಕ್ಕೋ ಹೋಗಬೇಕಾಗಿಲ್ಲ; ಎಲ್ಲಿ ಆಧ್ಯಾತ್ಮಿಕ ಸ್ಫೂರ್ತಿ ದೊರಕುವುದೋ ಅದೆಲ್ಲವೂ ತೀರ್ಥ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಕೆಲವು ತೀರ್ಥಕ್ಷೇತ್ರಗಳ, ತೀರ್ಥಯಾತ್ರೆಗಳ ಬಗ್ಗೆ ಬರೆದಿರುವ ಲೇಖಕರು ಬೆಂಗಳೂರು ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಯುವಜನತೆಗೆ ಸ್ಫೂರ್ತಿ ನೀಡುವ ಹಲವು ಚಟುವಟಿಕೆಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.*

ಸ್ವಾಮಿ ವಿವೇಕಾನಂದರು ಭಾರತಕ್ಕೆ ಬರುವ ಹಿಂದಿನ ದಿನ ಲಂಡನ್‌ನಲ್ಲಿ ಅವರ ಸ್ನೇಹಿತರೊಬ್ಬರು ಒಂದು ಪ್ರಶ್ನೆಯನ್ನು ಮಾಡಿದರು, ''ಸ್ವಾಮೀಜಿ, ನಿಮ್ಮ ಮೂರು ವರ್ಷದ ಐಷಾರಾಮಿ ಮತ್ತು ಶಕ್ತಿಶಾಲಿಯಾದ ಪಾಶ್ಚಾತ್ಯ ರಾಷ್ಟ್ರಗಳ ಭೇಟಿಯ ನಂತರ ಈಗ ತಮ್ಮ ಮಾತೃಭೂಮಿಯ ಬಗ್ಗೆ ತಮ್ಮ ಅಭಿಪ್ರಾಯವೇನು?'' ಎಂದು. ಆಗ ಸ್ವಾಮೀಜಿಯವರು, ''ನಾನು ಬರುವ ಮುಂಚೆ ಭಾರತವನ್ನು ಪ್ರೀತಿಸುತ್ತಿದ್ದೆ. ಈಗ ನನಗೆ ಭಾರತದ ಪ್ರತಿಯೊಂದು ಧೂಳಿನ ಕಣವೂ ಪವಿತ್ರ, ಅಲ್ಲಿನ ಗಾಳಿಯು ಪವಿತ್ರ; ಅದು ಪರಮಪವಿತ್ರವಾದ ಭೂಮಿ, ಅದೊಂದು ತೀರ್ಥಕ್ಷೇತ್ರ'' ಎಂದರು.

ಇದು ಒಬ್ಬ ಭಾವೋನ್ಮತ್ತ ದೇಶಭಕ್ತನ ಸಾಮಾನ್ಯ ಉದ್ಗಾರವಲ್ಲ, ಒಬ್ಬ ಅನುಭಾವಿಯ ಅನುಭವದ ನುಡಿಗಳು. ಈ ನಮ್ಮ ಭರತಖಂಡದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಹಿಂದೂಕುಷ್‌ನಿಂದ ಬಂಗಾಳಕೊಲ್ಲಿಯವರೆಗೂ ಪ್ರತಿಯೊಂದು ಧೂಳಿನ ಕಣವೂ ಕೂಡ ಸಾಧುಸಂತರ, ಮಹಾತ್ಮರ, ಅವತಾರ ಪುರುಷರ, ಭಕ್ತರ ಪಾದಸ್ಪರ್ಶದಿಂದ ಪವಿತ್ರಗೊಳಿಸಿಕೊಂಡಿದೆ. ಒಂದೊಂದು ಊರು-ಬೀದಿಯಲ್ಲಿಯೂ ಒಬ್ಬೊಬ್ಬ ದಾರ್ಶನಿಕ, ಜ್ಞಾನಿ, ಭಕ್ತ ಅಡಗಿದ್ದಾನೆ. ಅಂತಹ ಪ್ರತಿಯೊಂದು ಪ್ರದೇಶದಲ್ಲೂ ತೀರ್ಥಕ್ಷೇತ್ರವೊಂದು ಉದ್ಭವಿಸಿದೆ, ಆ ಸ್ಥಳಗಳು ಪವಿತ್ರಗೊಂಡಿವೆ.

### ತೀರ್ಥಕ್ಷೇತ್ರವೆಂದರೇನು?

'ತೀರ್ಯತೇ ಅನೇನ ಇತಿ ತೀರ್ಥಂ ಸಂಸಾರಸಾಗರ ತರಣೋಪಾಯಭೂತಮ್' ಅಂದರೆ, ಯಾವುದರಿಂದ ದಾಟಬಹುದೋ ಅದು ತೀರ್ಥ, ಸಂಸಾರ ಸಾಗರವನ್ನು ದಾಟಲು ಇರುವ ಉಪಾಯವೇ ಈ ತೀರ್ಥ ಎಂದು ನಿರ್ವಚನವು ಹೇಳುತ್ತದೆ. ಅಲ್ಲದೆ ಭಾಗವತದಲ್ಲಿ (೯.೯.೬) ಗಂಗೆ ಕೇಳುತ್ತಾಳೆ: ''ಪಾಪಿಗಳು ನನ್ನಲ್ಲಿ ಸ್ನಾನ ಮಾಡಿ ಶುದ್ಧರಾಗುತ್ತಾರೆ, ಆದರೆ ಅವರು ನನ್ನಲ್ಲಿ ಬಿಟ್ಟು ಹೋಗುವ ಪಾಪದ ಭಾರವನ್ನು ನಾನು ಹೇಗೆ ತಡೆದುಕೊಳ್ಳಲಿ?'' ಈ ಪ್ರಶ್ನೆಗೆ ಭಗೀರಥ ಹೀಗೆ ಉತ್ತರಿಸುತ್ತಾನೆ: ''ಸಾಧುಗಳೂ, ಸಂನ್ಯಾಸಿಗಳೂ, ಶಾಂತಮನಸ್ಸುಳ್ಳವರೂ, ಲೋಕಪಾವನಕರರೂ ತಮ್ಮ ಸ್ಪರ್ಶದಿಂದ (ಇಲ್ಲಿ ಸ್ನಾನ ಮಾಡುವುದರಿಂದ) ನಿನ್ನ ಪಾಪವನ್ನು ನಾಶ ಮಾಡುತ್ತಾರೆ. ಏಕೆಂದರೆ ಅವರ ಹೃದಯದಲ್ಲಿ ಶ್ರೀಹರಿಯು ನೆಲೆಸಿರುತ್ತಾನೆ.'' ಮತ್ತೊಂದು ಕಡೆ ವಿದುರನಿಗೆ ಹೇಳುವ ಮಾತು, ''ಹೇ ಮಹಾತ್ಮ, ಶ್ರೀಹರಿಯನ್ನು ತಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡಿರುವ ನಿನ್ನಂಥ ಭಗವದ್ಭಕ್ತರು, ತೀರ್ಥಕ್ಷೇತ್ರಗಳನ್ನು ಮತ್ತಷ್ಟು ಪವಿತ್ರವನ್ನಾಗಿ ಮಾಡುತ್ತಾರೆ'' *(ಭಾಗವತ ೧.೧೩.೧೦)* ಎಂದಿದೆ. ಅದೇ ಭಾಗವತವು ಮತ್ತೊಂದು ಕಡೆ *(೪.೩೦.೩೭)* ಹೇಳುತ್ತದೆ, ''ತೀರ್ಥಕ್ಷೇತ್ರಗಳನ್ನು ಪವಿತ್ರಮಾಡಲೆಂದೇ ಕಾಲ್ನಡಿಗೆಯಲ್ಲಿ (ಭಗವದ್ಭಕ್ತರು, ಸಾಧುಗಳೂ, ಸಂತರು) ಸಂಚರಿಸುತ್ತಿರುವಾಗ, (ಸಂಸಾರಬೇಗೆಗೆ) ಹೆದರಿರುವ ನನ್ನಂಥ ವ್ಯಕ್ತಿಗೆ ಅವರ ಸಮಾಗಮವು ಇಷ್ಟವಾಗುವುದಿಲ್ಲವೇನು?'' ಎಂದು.

ಅಲ್ಲದೆ ಶ್ರೀರಾಮಕೃಷ್ಣರು ಹೇಳುತ್ತಾರೆ, ''ಯಾವ ಸ್ಥಾನದಲ್ಲಿ ಪರಮಾತ್ಮದರ್ಶನದ ಉದ್ದೇಶದಿಂದ ಅನೇಕ ಜನರು ದೀರ್ಘಕಾಲ ತಪಸ್ಸು, ಧ್ಯಾನ, ಜಪ, ಪ್ರಾರ್ಥನೆಗಳನ್ನು ಮಾಡಿರುತ್ತಾರೆಯೋ ಅಲ್ಲಿ ಪರಮಾತ್ಮನ ಪ್ರಕಾಶವು ನಿಜವಾಗಿಯೂ ಇದೆ ಎಂದು ತಿಳಿ.'' ಅವರ ಭಕ್ತಿಯಿಂದ ಅಲ್ಲಿ ಈಶ್ವರೀಯ ಭಾವವು ಹೆಪ್ಪುಗಟ್ಟಿ ಶೇಖರಣವಾಗಿರುತ್ತದೆ. ಈ ಕಾರಣದಿಂದಲೇ ಅಲ್ಲಿ ಸಹಜವಾಗಿಯೇ ಈಶ್ವರೀಯ ಭಾವದ ಉದ್ದೀಪನ, ಪರಮೇಶ್ವರನ ದರ್ಶನವಾಗುತ್ತದೆ. ಯುಗಯುಗಾಂತರಗಳಿಂದ ಎಷ್ಟೊಂದು ಜನ ಸಾಧುಗಳು, ಭಕ್ತರು, ಸಿದ್ಧಪುರುಷರು ಈ ಎಲ್ಲಾ ತೀರ್ಥಕ್ಷೇತ್ರಗಳಿಗೆ ಭಗವದ್ದರ್ಶನ ಮಾಡಲು ಬಂದಿರುತ್ತಾರೆ! ಇತರ ಎಲ್ಲಾ ಆಸೆಗಳನ್ನು ಬಿಟ್ಟು, ಭಗವಂತನನ್ನು ತಮ್ಮ ಹೃದಯಗಳಲ್ಲಿ ಪ್ರಾರ್ಥನೆಯನ್ನು ಮಾಡಿರುತ್ತಾರೆ. ಈ ಕಾರಣದಿಂದ ಭಗವಂತನು ಎಲ್ಲೆಡೆಗಳಲ್ಲಿಯೂ ಇರುವುದು ಸತ್ಯವಾದರೂ, ಈ ಎಲ್ಲಾ ತೀರ್ಥಕ್ಷೇತ್ರಗಳಲ್ಲಿ ಆತನ ವಿಶೇಷವಾದ ಪ್ರಕಾಶವಿರುತ್ತದೆ. ಯಾರ ಹೃದಯದಲ್ಲಿ ಭಕ್ತಿಭಾವವಿದೆಯೋ ಅವರ ಭಾವವು ಇಂಥಾ ಕ್ಷೇತ್ರಗಳಲ್ಲಿ ಉದ್ದೀಪನೆಯಾಗಿ ಮತ್ತಷ್ಟು ಹೆಚ್ಚುತ್ತದೆ. ಎಲ್ಲಿ ಭಗವಂತನ ಕಥಾಲಾಪ ನಡೆಯುವುದೋ ಅಲ್ಲಿ ಅವನ ಆವಿರ್ಭಾವವಾಗಿ ಎಲ್ಲಾ ತೀರ್ಥಗಳ ಉಗಮವಲ್ಲಿ ಆಗುತ್ತದೆ ಎಂದು ಆದ ಮೇಲೆ ತೀರ್ಥಗಳು ಏನು ಎಂಬುದನ್ನು ನಾವು ಭಾವಿಸಿಯೇ ನೋಡಬೇಕು. ಇಂತಹ ಒಂದೆರೆಡು ತೀರ್ಥಗಳನ್ನು ನೋಡಿಬರೋಣ, ಬನ್ನಿ.

### ವೇದಾವತಿ ತೀರದ ಹಿರಿಯೂರಿನ ಶ್ರೀ ತೇರುಮಲ್ಲೇಶ್ವರ ಸ್ವಾಮಿ

ಬೆಂಗಳೂರಿನಿಂದ ಸುಮಾರು ೧೫೫ ಕಿ. ಮೀ. ದೂರದಲ್ಲಿ, ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿರುವ ತಾಲ್ಲೂಕು ಕೇಂದ್ರವಿದು. ರಸ್ತೆಯು ಚೆನ್ನಾಗಿದ್ದರೆ ಸುಮಾರು ೨ ಗಂಟೆ ೩೦ ನಿಮಿಷ



ದಲ್ಲಿ ಆ ಸ್ಥಳವನ್ನು ಬೆಂಗಳೂರಿನಿಂದ ತಲುಪಬಹುದು. ಹಾದಿಯಲ್ಲಿ ಊಟೋಪಚಾರಕ್ಕೆ ಯಾವುದೇ ಕೊರತೆಯಿಲ್ಲ. ಅಲ್ಲಿನ ಪೂಜೆ ಮುಂತಾದ ವಿಶೇಷ ಕಾರ್ಯಗಳನ್ನು ವಿಶ್ವನಾಥ ಎಂಬುವ ಅರ್ಚಕರ ಕುಟುಂಬ ಬಹಳ ಕಾಲದಿಂದಲೂ ಸುಸೂತ್ರವಾಗಿ, ಭಕ್ತಿಭಾವದಿಂದ ನಡೆಸಿಕೊಂಡು ಬಂದಿದ್ದಾರೆ. ಇಲ್ಲಿನ ಶ್ರೀತೇರುಮಲ್ಲೇಶನ ದೇವಾಲಯವು ಇತಿಹಾಸ ಪ್ರಸಿದ್ಧವಾಗಿದ್ದು ಇದನ್ನು ೧೪೪೬ ರಲ್ಲಿ ಕಟ್ಟಲಾಗಿದೆ ಎಂದು ತಿಳಿದು ಬರುತ್ತದೆ.

ಅಲ್ಲಿನ ಪಾಳೇಗಾರ ಕೆಂಚಪ್ಪನಾಯಕ ಎನ್ನುವವರು ದ್ರಾವಿಡ ಮತ್ತು ವಿಜಯನಗರದ ಶೈಲಿಯಲ್ಲಿ ಕಟ್ಟಿಸಿದ. ಈ ದೇವಾಲಯದ ಗೋಪುರವು ಸುಮಾರು ೭೫ ಅಡಿ ಎತ್ತರ ಹಾಗೂ ೨೫ ಅಡಿ ಅಗಲದ ಶಿಖರವನ್ನು ಹೊಂದಿದೆ. ಈ ದೇವಾಲಯವು ಅತ್ಯಂತ ವಿಶಾಲವೂ ಸುಂದರವೂ ಆಗಿದ್ದು, ದಕ್ಷಿಣ ಕಾಶಿ ಎಂದು ಪ್ರಸಿದ್ಧವಾಗಿದೆ. ಪೂರ್ವಕ್ಕೆ ಮುಖ ಮಾಡಿರುವ ಮುಖ್ಯದ್ವಾರದಿಂದ ಪ್ರವೇಶವನ್ನು ಮಾಡಬಹುದು. ಅದೇ ರೀತಿ ದೇವಾಲಯವನ್ನು ಪ್ರವೇಶಿಸಲು ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗಳಲ್ಲಿ ಬಾಗಿಲುಗಳಿವೆ. ಸುಂದರವಾದ ದೇವದೇವಿಯರ ವಿಗ್ರಹಗಳಿಂದ ಆವೃತ್ತವಾಗಿರುವ ಈ ದೇವಾಲಯದಲ್ಲಿ ಶಿವನು ಕಾಶಿಯ ವಿಶ್ವೇಶ್ವರನ ಹಾಗೆ ದಕ್ಷಿಣಕ್ಕೆ ಮುಖವನ್ನು ಮಾಡಿ ಕುಳಿತುಕೊಂಡಿದ್ದಾನೆ. ಇದರಿಂದಲೇ ಅದಕ್ಕೆ ದಕ್ಷಿಣ ಕಾಶಿ ಎಂಬ ಹೆಸರು ಬಂದಿದೆ. ಅಲ್ಲಿಯೇ ಆತನ ಬಲಭಾಗದ ಮುಂದೆ ಪಾರ್ವತಿಯ ಸುಂದರ ಮೂರ್ತಿಯೂ ಇದೆ.

ಶಿವರಾತ್ರಿಯ ಸುಮಾರು ಐದಾರು ದಿನಗಳ ಮುಂಚೆ ಇಲ್ಲಿ ವಾರ್ಷಿಕ ಜಾತ್ರೆಯು ನಡೆಯುತ್ತದೆ. ಆಂಧ್ರ, ತಮಿಳುನಾಡು ಹಾಗೂ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಿಂದಲೂ ಸಾವಿರಾರು ಜನ ಭಕ್ತರು ಬಂದು ಸೇರುತ್ತಾರೆ. ರಥದಲ್ಲಿ ಕುಳಿತ ಭಗವಂತನ ಈ ಅದ್ಭುತವಾದ ಜಾತ್ರೆಯ ಸೊಬಗನ್ನು ಸವಿಯಲು ಒಮ್ಮೆಯಾದರೂ ಇಲ್ಲಿಗೆ ಭೇಟಿ ನೀಡಬೇಕು.

ಮಾಘಮಾಸದ ಮಾಘ ನಕ್ಷತ್ರದಲ್ಲಿ ತೇರು ಸಂಪನ್ನವಾಗುತ್ತದೆ. ೨೦ ಅಡಿ ಉದ್ದದ ಕಬ್ಬಿಣದ ಶಿವಧನುಸ್ಸನ್ನು ಭಕ್ತರು ಹೊತ್ತು ವೇದಾವತಿ ನದಿಗೆ ಹೋಗಿ ಅಲ್ಲಿ ಪೂಜೆಗೈದು ಮತ್ತೆ ಅಲ್ಲಿಂದ ಮರಳಿ ತರುತ್ತಾರೆ. ಬಹುಭಾರದ ಶಿವಧನುಸ್ಸನ್ನು ಎತ್ತಿಕೊಂಡು ಹೋಗುವಾಗ ತೂಕ ಹೆಚ್ಚಿದ್ದರೆ, ಬರುವಾಗ ಕಡಿಮೆಯಾಗುವುದಂತೆ. ಹಾಗಾದಲ್ಲಿ ಮಳೆ, ಬೆಳೆ ಉತ್ತಮವಾಗುತ್ತದೆ, ಇಲ್ಲವಾದಲ್ಲಿ ಬರಗಾಲ ಕಟ್ಟಿಟ್ಟದ್ದು ಎಂಬ ನಂಬಿಕೆಯಿದೆ. ಅಂದು ಮಧ್ಯಾಹ್ನ ಸುಮಾರು ೧೨ ರಿಂದ ಸಂಜೆ ೫ ರ ಒಳಗೆ ತೇರು ಎಳೆಯುವುದನ್ನು ಕಾಣಬಹುದು. ಆಗ ಭಕ್ತರು ತೇರಿನ ಮೇಲೆ ಬಾಳೆಹಣ್ಣು, ಧವನ ಅಥವಾ ಪನ್ನೀರಿನ ಎಲೆಯನ್ನು ಎಸೆದು ತಮ್ಮ ಭಕ್ತಿಯನ್ನು, ಆನಂದವನ್ನು ವ್ಯಕ್ತಪಡಿಸುತ್ತಾರೆ. ಅಲ್ಲಿನ ತಳವಾರ ನಾಯಕ ಭೋಜರಾಜ್ ಬಹಳ ವರ್ಷಗಳಿಂದಲೂ ಈ ತೇರುಮಲ್ಲೇಶನ ತೇರನ್ನು ಸುಸೂತ್ರವಾಗಿ ಎಳೆದು ಸುಮಾರು ಒಂದು ಫರ್ಲಾಂಗ್ ದೂರದ ಸಿದ್ಧನಾಯಕನ ವೃತ್ತಕ್ಕೆ ತೆಗೆದುಕೊಂಡು ಹೋಗುವುದು ವಾಡಿಕೆ. ಮತ್ತೆ ಎರಡು ದಿನಗಳ ನಂತರ ಮರಳಿ ದೇವಾಲಯಕ್ಕೆ ತರುವ ಅಸಾಧ್ಯ ಕಾರ್ಯವನ್ನು ಸಾಧ್ಯ ಮಾಡುತ್ತಿದ್ದಾರೆ. ಆ ದಿನಗಳಲ್ಲಿ ಗಿಳಿ, ನಂದಿ, ಗಂಡಭೇರುಂಡ, ನವಿಲು, ಸಿಂಹ, ಸರ್ಪ, ಅಶ್ವ, ಗಜ, ಬಸವ ವಾಹನಗಳ ದೇವತೆಗಳನ್ನು ಕುಳ್ಳಿರಿಸಿ ಉತ್ಸವ ಆಚರಿಸುತ್ತಾರೆ. ಆಗ ಮೂರು ದಿನ ಗರ್ಭಗೃಹವನ್ನು ಯಾರೂ ಪ್ರವೇಶಿಸುವಂತಿಲ್ಲ. ಆಗ ದೇವಾಲಯದ ಸುತ್ತಮುತ್ತಲೂ ಹಲವಾರು ಊರುಗಳಿಂದ ಬಂದ ವ್ಯಾಪಾರಸ್ಥರು ಬತ್ತಾಸು, ಮಂಡಕ್ಕಿ, ಆಟಿಕೆಗಳ ಅಂಗಡಿಗಳನ್ನು ತೆರೆದು ಜಾತ್ರೆಗೆ ಮತ್ತಷ್ಟು ಮೆರಗನ್ನು ನೀಡುತ್ತಾರೆ.

ಈ ದೇವಾಲಯದ ಪ್ರಾಂಗಣದಲ್ಲಿ ನಂದೀಮಂಟಪವಿದ್ದು ಅದರ ಹಿಂದೆ ಎತ್ತರದ ದೀಪಸ್ತಂಭವಿದೆ. ೪೮ ಅಡಿ ಎತ್ತರದ ಈ ಸ್ತಂಭದ ಮೇಲೆ ೮ ಅಡಿ ಬಸವ ಮಂಟಪವಿರುವ ಈ ದೀಪಸ್ತಂಭಕ್ಕೆ ಒಂದು ವಿಶೇಷತೆಯಿದೆ. ಆಂಧ್ರಪ್ರದೇಶದಿಂದ ಒಂದು ದೊಡ್ಡ ದೀಪದ ಸ್ತಂಭವನ್ನು ಮಾಡಿಸಿ ತೆಗೆದುಕೊಂಡು ಬರುತ್ತಿದ್ದಾಗ, ಅಂಬಲಗೆರೆಯ ಬಳಿ ಅದು ಉರಳಿಬಿದ್ದು, ಎರಡು ಭಾಗವಾಯಿತು. ಆ ಒಂದು ಭಾಗವನ್ನು ಅಂಬಲಗೆರೆ ಶ್ರೀರಂಗನಾಥ ದೇವಾಲಯದಲ್ಲಿ ಮತ್ತೊಂದನ್ನು ಶ್ರೀತೇರುಮಲ್ಲೇಶನ ದೇವಾಲಯದಲ್ಲಿ ನಿಲ್ಲಿಸಲಾಯಿತು. ಜಗಲಿಯಾಕಾರದ ಕಟ್ಟೆಯ ಮೇಲಿರುವ ಈ ದೀಪಸ್ತಂಭವನ್ನು ವರ್ಷದಲ್ಲಿ ಎರಡು ಬಾರಿ ಬೆಳಗಿಸುತ್ತಾರೆ. ಒಮ್ಮೆ ಕಾರ್ತಿಕ ಮಾಸ ಮತ್ತೊಮ್ಮೆ ಮಾಘ ಮಾಸದಲ್ಲಿ ಎಣ್ಣೆ, ಬತ್ತಿ ಹಾಕಿ ಹಚ್ಚಲಾಗುತ್ತದೆ. ಮಕ್ಕಳಾಗಲು, ಮದುವೆಯಾಗಲು, ಕಷ್ಟನಿವಾರಣೆಗೆ ಇತ್ಯಾದಿ ಹರಕೆ ಹೊತ್ತು ದೀಪವನ್ನು ಬೆಳಗಿಸುತ್ತಾರೆ. ಸಂಜೆ ೬ರಿಂದ ಮುಂಜಾನೆ ೬ರವರೆಗೂ ಉರಿಯುವ ಈ ದೀಪ ಊರಿಂದ ಹೊರಗೆ ಸುಮಾರು ಮೈಲಿಯವರೆಗೂ ಕಾಣುತ್ತಿತ್ತು. ಈಗ ದೊಡ್ಡ ದೊಡ್ಡ ಕಟ್ಟಡಗಳು ಅಡ್ಡ ಬಂದು ಕಾಣದಂತಾಗಿದೆ.

೧೫೬೭ರ ಸಮಯದಲ್ಲಿ ವಿದ್ಯಾನಗರಿಯನ್ನು ಆಳುತ್ತಿದ್ದ ವೀರ ಪ್ರತಾಪ ಸದಾಶಿವರಾಯ ಎನ್ನುವವರು ದತ್ತಿ ನೀಡಿದ್ದರೆಂದು ಶಾಸನವು ಹೇಳುತ್ತದೆ. ಈ ಶಾಸನ ದೇವಾಲಯದ ಹಿಂಭಾಗದಲ್ಲಿದ್ದು ಅದಕ್ಕೆ ಭಕ್ತರು ಹಚ್ಚಿದ ಭಕ್ತಿಯ ಎಣ್ಣೆ, ಕುಂಕುಮ, ವಿಭೂತಿ ಅದನ್ನು ಓದಲು ಬಿಡುವುದಿಲ್ಲ. ಅಲ್ಲದೆ ೧೭ನೇ ಶತಮಾನದಲ್ಲಿ ಚಿತ್ರದುರ್ಗದ ನಾಯಕ ಭರಮಣ್ಣ ಈ ದೇವರ ಭಕ್ತನಾಗಿದ್ದ ಎನ್ನಲಾಗಿದೆ.

ಐತಿಹಾಸಿಕ ಮತ್ತು ಪೌರಾಣಿಕ ಕಥೆಗಳು ಈ ದೇವಾಲಯಕ್ಕೆ ಒಂದು ಮಹತ್ತರವಾದ ಸ್ಥಾನವನ್ನು ನೀಡುತ್ತವೆ. ಆಂಧ್ರದ ಮಹಾ ಶಿವಯೋಗಿ ವೇಮನರೆಡ್ಡಿಯವರ ಅತ್ತಿಗೆ ಹೇಮರೆಡ್ಡಿ ಮಲ್ಲಮ್ಮ ಇದೇ ಹಿರಿಯೂರಿನವಳೆಂದೂ, ಆಕೆ ಪ್ರತಿವರ್ಷವೂ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನವನ್ನು ಮಾಡಿ ಬರುತ್ತಿದ್ದಳೆಂದೂ ಹೇಳಲಾಗಿದೆ. ಆಕೆಗೆ ವಯಸ್ಸಾಗಿ, ಯಾತ್ರೆಯನ್ನು ಮಾಡಲು ಆಗದ ಕೊನೆಗಾಲದಲ್ಲಿ ಆಕೆ ಮಲ್ಲಿಕಾರ್ಜುನನ ದರ್ಶನವನ್ನು ಮಾಡಿ ಬರುವಾಗ ಪ್ರಾರ್ಥನೆಯನ್ನು ಮಾಡಿದಳಂತೆ, ''ಪ್ರಭು, ನನ್ನ ಶರೀರ ಶಕ್ತಿಯನ್ನು ಕಳೆದುಕೊಳ್ಳುತ್ತಿದೆ, ಕಣ್ಣು ಕಾಣಿಸದಂತಾಗುತ್ತಿದೆ. ಇನ್ನು ಮುಂದೆ ನಿನ್ನ ದರ್ಶನಕ್ಕೆ ಬರಲು ಆಗುವುದೋ ಇಲ್ಲವೋ ತಿಳಿಯದು. ಇನ್ನು ನೀನೇ ಕಾಪಾಡಬೇಕು'' ಎಂದು. ಮರಳಿ ಬರುವಾಗ ಹಾದಿಯಲ್ಲಿ ಎಲೆಅಡಿಕೆ ತಿನ್ನುವ ಬಯಕೆಯಿಂದ ಒಂದು ಮರದ ಕೆಳಗೆ ಕುಳಿತುಕೊಂಡು, ಹಲ್ಲುಗಳಿಲ್ಲದೆ ಆಕೆ ಅದನ್ನು ಜಜ್ಜಿ ತಿನ್ನಲು ಹತ್ತಿರದಲ್ಲೇ ಇದ್ದ ಒಂದು ಚಿಕ್ಕ ದುಂಡನೆಯ ಕಲ್ಲನ್ನು ತೆಗೆದುಕೊಂಡು, ಎಲೆ ಅಡಕೆಯನ್ನು ಜಜ್ಜಿ ತಿಂದು ಎಸೆದು ಬಿಟ್ಟಳು. ಮತ್ತೆ ಬಹಳ ಕಾಲದ ಮೇಲೆ ಎಲೆಅಡಿಕೆ ತಿನ್ನಲು ಚೀಲಕ್ಕೆ ಕೈ ಹಾಕಿದಾಗ ಮತ್ತೆ ಅದೇ ಕಲ್ಲು ಕೈಗೆ ಸಿಕ್ಕಿತು. ಆಶ್ಚರ್ಯಗೊಂಡು ಎಸೆದ ಕಲ್ಲು ಮತ್ತೆ ಹೇಗೆ ಚೀಲಕ್ಕೆ ಬಂತು ಎಂಬುದನ್ನು ಅರಿಯದಾದಳು. ನಂತರ ತನ್ನ ಕೆಲಸ ಮುಗಿಸಿ ಆ ಕಲ್ಲನ್ನು ಎಸೆದು ಮನಸ್ಸಿನಲ್ಲಿ, ಆ ಕಲ್ಲನ್ನು ಎಸೆದಿರುವುದನ್ನು ಖಾತ್ರಿಗೊಳಿಸಿಕೊಂಡಳು. ಮತ್ತೆ ತನ್ನ ಮನೆಗೆ ಬಂದು ಎಲೆ ಅಡಿಕೆಯ ಚೀಲವನ್ನು ತೆಗೆದರೆ ಅದೇ ಕಲ್ಲಿದೆ! ಆಶ್ಚರ್ಯದಿಂದ ಆ ಕಲ್ಲನ್ನು ನೆಲದ ಮೇಲಿಟ್ಟಾಗ ಅದು ಉರುಳಿಕೊಂಡು ಹತ್ತಿರದಲ್ಲಿದ್ದ ಒರಳೊಂದರಲ್ಲಿ ಬಿತ್ತು. ಆಯಾಸಗೊಂಡಿದ್ದ ಆಕೆ ಅಲ್ಲಿಯೇ ಮಲಗಿಕೊಂಡಳು. ಆಗ ಆಕೆಯ ಕನಸಿನಲ್ಲಿ ಮಲ್ಲಿಕಾರ್ಜುನ ಕಾಣಿಸಿಕೊಂಡು, ''ಪ್ರಿಯ ಭಕ್ತೆ, ಇನ್ನು ನಿನಗೆ ವಯಸ್ಸಾಗಿರುವ ಕಾರಣ ಶ್ರೀಶೈಲಕ್ಕೆ ಬರುವುದು ಬೇಡ. ನಿನಗಾಗಿ ನಾನೇ ಇಲ್ಲಿಗೆ ಎಲೆಅಡಿಕೆ ಕುಟ್ಟುವ ಕಲ್ಲಿನ ರೂಪದಲ್ಲಿ ಬಂದಿದ್ದೇನೆ. ನನ್ನನ್ನು ಇಲ್ಲಿಯೇ ಪೂಜೆ ಮಾಡು'' ಎಂದನು. ತಕ್ಷಣವೇ ಆಕೆ ಎದ್ದು ನೋಡಿದಾಗ ಆಕೆ ಇಟ್ಟಿದ್ದ ಕಲ್ಲು ಬೆಳೆದು ದೊಡ್ಡದಾಗಿತ್ತು. ಅಂದಿನಿಂದಲೂ ಅಲ್ಲಿ ಪೂಜಿಸಲ್ಪಡುತ್ತಿರುವ ಮಲ್ಲಮ್ಮನ ಈಶ, ಮಲ್ಲೇಶನೇ ವೇಮನರೆಡ್ಡಿ ಮತ್ತು ಮಲ್ಲಮ್ಮನ ಕುಲದೈವವಾಗಿದ್ದಾನೆ.

ಪೌರಾಣಿಕ ಕತೆಯೂ ಕೂಡ ಅತ್ಯದ್ಭುತವಾಗಿದ್ದು ಗಂಗೆಯ ಸಹವಾಸ ಮಾಡಿದ್ದಕ್ಕೆ ಗಂಡ ಪರಶಿವನನ್ನು ಹೊರಹಾಕುವ ಪಾರ್ವತಿಯ ಹುಸಿಮುನಿಸಿನ ಕತೆಯನ್ನು ರಾತ್ರಿಯೆಲ್ಲ ಪ್ರಶ್ನೋತ್ತರದ ಮೂಲಕ ಹಾಡಿ ಆನಂದಿಸುತ್ತಾರೆ.

ಈತನಿಗೆ ತೇರು ಎಂಬ ನಾಮ ಸೇರಿಕೊಂಡಿದ್ದೂ ಕೂಡ ಒಂದು ಪವಾಡವೇ! ಹೊಸದುರ್ಗ ತಾಲ್ಲೂಕು ಹಿರಿಯೂರಿನ ನೆರೆಯ ಒಂದು ಪ್ರದೇಶ. ಅಲ್ಲಿನ ಯಗಚಿಯ ಮಲ್ಲೇಶ್ವರನ ರಥೋತ್ಸವ ವಿಜೃಂಭಣೆಯಿಂದ ಆಗುತ್ತದೆ. ಹಿರಿಯೂರಿನ ಭಕ್ತರೂ ಕೂಡ ಭಗವಂತನಿಗೊಂದು ರಥವನ್ನು ಮಾಡಿಸಬೇಕೆಂಬ ಬಯಕೆಯನ್ನು ಹೊತ್ತು ಆತನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿದರಂತೆ. ಅದೇ ಸಮಯದಲ್ಲಿ ಭಾರೀ ಗಾಳಿಮಳೆ ಆರಂಭವಾಗಿ ಯಗಚಿಯ ಮಲ್ಲೇಶನ ರಥವೊಂದು ವೇದಾವತಿ ನದಿಯಲ್ಲಿ ತೇಲಿಬಂದು ಹಿರಿಯೂರಿನಲ್ಲಿ ನಿಂತಿತಂತೆ. ಆಗ ಭಕ್ತರು ಆನಂದದಿಂದ ಆ ರಥವನ್ನು ಎಳೆದು ತಂದು ಭಗವಂತನ ಪೂಜೆಯನ್ನು ನೆರವೇರಿಸಿದರಂತೆ. ಅಂದಿನಿಂದ ಮಲ್ಲೇಶ ಸ್ವಾಮಿಯು ಶ್ರೀ ತೇರುಮಲ್ಲೇಶನಾಗಿ ಪ್ರಸಿದ್ಧಿಯನ್ನು ಹೊಂದಿದ್ದಾನೆ.

ದೇವಾಲಯದ ಮುಂದಿರುವ ಉಯ್ಯಾಲೆ ಕಂಬ, ನಾಗರಕಟ್ಟೆ ಹಲವು ಮಾತೆಯರಿಗೆ ಸಂತಾನಭಾಗ್ಯವನ್ನು ಕರುಣಿಸುವ ಸ್ಥಾನವಾಗಿ ಪ್ರಸಿದ್ಧವಾಗಿವೆ. ಜಾತ್ರೆಯ ಕಾಲದಲ್ಲಿ ದೇವರನ್ನು ಉಯ್ಯಾಲೆಯಲ್ಲಿ ಕುಳ್ಳಿರಿಸಿ, ತೂಗಿದರೆ ಮಕ್ಕಳನ್ನು ಪಡೆಯುತ್ತಾರೆ ಎಂದು ನಂಬಿಕೆಯಿದೆ.

ಅಲ್ಲಿಂದ ಕೂಗಳತೆಯ ದೂರದಲ್ಲಿ , ತೇರುಮಲ್ಲೇಶನ ಉತ್ತರಕ್ಕೆ ಶ್ರೀದುರ್ಗಾದೇವಿಯ ದೇವಾಲಯವಿದೆ. ಪುರಾತನ ದೇವಾಲಯವು ಬಿದ್ದು ಹೋಗುತ್ತಿದ್ದುದನ್ನು ಕಂಡು ಇತ್ತೀಚೆಗೆ ನೂತನವಾದ ಸುಂದರ ಸದೃಢ ದೇವಾಲಯ ನಿರ್ಮಾಣಗೊಂಡಿದೆ. ಇಲ್ಲಿಗೆ ಸುತ್ತಮುತ್ತಲಿನ ಎಲ್ಲಾ ಊರುಗಳಿಂದ ಭಕ್ತರು ಬರುತ್ತಾರೆ. ಮುಖ್ಯವಾಗಿ ಮಕ್ಕಳಿಗೆ ಬರುವ ಅನೇಕ ರೋಗಗಳ ನಿವಾರಣೆಗೆ ಯಂತ್ರಗಳನ್ನು ಕಟ್ಟಿಸಿಕೊಳ್ಳಲು ಎಲ್ಲಾ ಮತಪಂಥದವರು ಇಲ್ಲಿಗೆ ಬರುತ್ತಾರೆ. ಈ ದೇವಿಯ ಕೃಪಾಶೀರ್ವಾದದಿಂದ ಹಲವು ರೋಗಗಳು ವಾಸಿಯಾಗುತ್ತಿರುವುದನ್ನು ಕಾಣಬಹುದು. ಆ ದೇವಾಲಯದ ಎಡಭಾಗಕ್ಕೆ ಬನಶಂಕರಿಯ ದೇವಾಲಯವಿದೆ. ಅಲ್ಲಿಂದ ಪಶ್ಚಿಮಕ್ಕೆ ಶ್ರೀರಾಮ ಮಂದಿರವಿದೆ.

ತೇರುಮಲ್ಲೇಶನ ದೇವಾಲಯದಿಂದ ಉತ್ತರಕ್ಕೆ ಮತ್ತೊಂದು ಪುರಾತನ ಹಾಗೂ ಪ್ರಸಿದ್ಧವಾದ ದೇವಾಲಯ ವೆಂಕಟೇಶ ಮತ್ತು ಮೈಲಾರಲಿಂಗ ದೇವಾಲಯ ಮತ್ತು ಅದರ ಮುಂದೆಯೇ ಇರುವ ಶ್ರೀರಾಘವೇಂದ್ರ ಸ್ವಾಮಿಗಳ ಮಂತ್ರಾಲಯ. ಈ ಮೈಲಾರಲಿಂಗನದ್ದು ಅತ್ಯಂತ ಮಹಿಮೆಯಿಂದ ಕೂಡಿದ ಪ್ರದೇಶ. ಆತನ ಜಾತ್ರೆಯಲ್ಲಿಯೂ ಜನಸಾಗರ ಸೇರುವುದು ಸಾಮಾನ್ಯ. ಹತ್ತಾರು ಪಲ್ಲಕ್ಕಿಗಳು, ಧನುಸ್ಸು ಹೊರುವುದು, ಕಬ್ಬಿಣದ ಸರಪಳಿಯನ್ನು ಹರಿಯುವುದು, ವಾರಗಳ ಕಾಲ ಉಪವಾಸವ್ರತ ಮುಂತಾದವು ನಡೆಯುತ್ತದೆ.

ತೇರು ಸಾಗುವ ಮಾರ್ಗದಲ್ಲಿಯೇ ಕನ್ಯಾಕುಮಾರಿ ದೇವಾಲಯ ಮತ್ತು ತೇರು ನಿಲ್ಲುವ ಸ್ಥಳ ಸಿದ್ಧನಾಯಕನ ವೃತ್ತದಲ್ಲಿ ಪುರಾತನವಾದ ಆಂಜನೇಯ ಸ್ವಾಮಿ ದೇವಾಲಯಗಳೂ ಇವೆ.

### ಮಾರೀಕಣಿವೆ, ವಾಣಿವಿಲಾಸಪುರ, ವಾಣಿವಿಲಾಸ ಸಾಗರ

ಹಿರಿಯೂರಿನಿಂದ ಚಿತ್ರದುರ್ಗ ಮಾರ್ಗದಲ್ಲಿ ಮುಂದುವರೆದು ಟಿ. ಬಿ. ವೃತ್ತದಲ್ಲಿ ಎಡಕ್ಕೆ ತಿರುಗಿ, ಅಲ್ಲಿಂದ ಸುಮಾರು ೨೦ ಕಿ.ಮೀ. ಹೊಸದುರ್ಗದ ಕಡೆಗೆ ಹೊರಟರೆ ಸಿಗುವ ಸ್ಥಳ ಮಾರೀ

ಕಣಿವೆ. ಎರಡು ಗುಡ್ಡಗಳ ಮಧ್ಯದಲ್ಲಿ ಒಂದು ಅಣೆಕಟ್ಟನ್ನು ಕಟ್ಟಲಾಗಿದೆ. ಇಲ್ಲಿ ಮಾರಮ್ಮ ದೇವಿಯ ಚಿಕ್ಕ ದೇವಾಲಯವಿದ್ದು, ಅವಳ ಮುಂದೆ ಭಕ್ತರು ಕುಳಿತುಕೊಂಡು ತಮ್ಮ ನೋವನ್ನು ತೋಡಿಕೊಳ್ಳುತ್ತಾರೆ. ಅವರ ಕೆಲಸ ಕಾರ್ಯಗಳು ಕೈಗೂಡುತ್ತವೆಯೇ ಇಲ್ಲವೇ ಎನ್ನುವುದನ್ನು ದೇವಿ ತನ್ನ ಬಲ ಅಥವಾ ಎಡಭಾಗದಿಂದ ಹೂವನ್ನು ಉದುರಿಸಿ ತಿಳಿಸುತ್ತಾಳೆ ಎನ್ನುವುದು ಇಲ್ಲಿನ ಮಹಿಮೆ. ಈಕೆಯನ್ನು ಕಣಿಮೆ ಮಾರಮ್ಮ ಎಂದು ಕರೆಯುತ್ತಾರೆ.

ಆಯಾತಾಕಾರದ ಗರ್ಭಗೃಹದಲ್ಲಿ ಆಣೆಕಟ್ಟಿನ ರಕ್ಷಣೆಗಾಗಿ, ಜಗನ್ಮಾತೆ ತನ್ನ ಕಾಲನ್ನು ಒತ್ತಿ ಹಿಡಿದು ಕುಳಿತಿದ್ದಾಳೆ. ಮುಖ್ಯ ದ್ವಾರಕ್ಕೆ ಬೆನ್ನುಹಾಕಿ ಕುಳಿತು ತನ್ನ ಬೆನ್ನು ಮಾತ್ರ ತೋರಿಸುತ್ತಾಳೆ. ಈ ದೇವಾಲಯದಲ್ಲಿ ವಿಶಾಲವಾದ ಸಭಾಮಂಟಪವಿದೆ. ಹಲವು ರೀತಿಯ ಕೆತ್ತನೆಗಳಿಂದ ಕೂಡಿದ ೪೦ ಕಂಬ-ಅರೆಕಂಬಗಳಿವೆ. ಅಲ್ಲಲ್ಲಿ ಸ್ತ್ರೀಪುರುಷರ ವೀರಗಲ್ಲುಗಳಿವೆ.

ಈ ದೇವಾಲಯದ ಆವರಣದಲ್ಲಿ ಭೂತಪ್ಪನಗುಡಿ, ಮಾತಂಗೆಮ್ಮ, ಎಲ್ಲಮ್ಮ ಮತ್ತು ಮಾರಮ್ಮನ ಗುಡಿಗಳಿದ್ದು ಭಕ್ತಾದಿಗಳು ತಮ್ಮ ಹರಕೆಯನ್ನು ತೀರಿಸುವ ಸಲುವಾಗಿ ಕೋಳಿ, ಕುರಿ, ಮೇಕೆ, ಟಗರುಗಳ ಬಲಿಯನ್ನು ಕೊಡುತ್ತಾರೆ. ಪ್ರತಿನಿತ್ಯವೂ ಪೂಜೆ ನಡೆಯುವ ಈ ದೇವಾಲಯದಲ್ಲಿ ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜೆ ಇರುತ್ತದೆ.

೧೫-೧೬ ನೇ ಶತಮಾನಕ್ಕೆ ಸೇರಿದ ಈ ದೇವಾಲಯವು ಚರಿತ್ರೆಯನ್ನು ಶತಮಾನಗಳ ಹಿಂದಕ್ಕೆ ಕರೆದೊಯ್ಯುತ್ತದೆ. ಮಾರಮ್ಮನ ಮೂಲಸ್ಥಾನ ಅಲ್ಲಿಯೇ ಹತ್ತಿರವಿರುವ ಭರಮಗಿರಿ. ವರುಷಕ್ಕೊಮ್ಮೆ ೩ ದಿನ ನಡೆವ ಜಾತ್ರೆಯ ಸಮಯದಲ್ಲಿ ಆಕೆಯ ಮೂಲಸ್ಥಾನದಿಂದಲೇ ಉತ್ಸವ ಮೂರ್ತಿಯು ಹೊರಡುತ್ತದೆ. ೧೬೫೦ ರ ಸಮಯದಲ್ಲಿ ಒಕ್ಕಲು ಗೌಡರ ಕುಟುಂಬಕ್ಕೆ ಈ ದೇವಾಲಯದ ಪೂಜೆಯ ಅಧಿಕಾರವನ್ನು ಕೊಟ್ಟಿದ್ದರು. ಮಂಗಳವಾರದಿಂದ ಪ್ರಾರಂಭವಾಗುವ ಈ ಉತ್ಸವ ಒಂದೊಂದು ದಿನವೂ ಒಂದೊಂದು ಕಾರ್ಯಕ್ರಮವನ್ನು ಹೊಂದಿದ್ದು ನಂತರದ ಮಂಗಳವಾರ ಅಂದರೆ ಎಂಟನೇ ದಿನಕ್ಕೆ ಪರಿಪೂರ್ಣವಾಗುತ್ತದೆ. ಒಂದೊಂದು ದಿನ ಒಂದು ವಿಶೇಷ ಪೂಜೆ - ದೇವಿಯ ಪ್ರಥಮ ಪೂಜೆ ಮದಲಂಗಿತ್ತಿ ಶಾಸ್ತ್ರ, ದೇವಿಯ ಗಂಗಾಪೂಜೆ ಮತ್ತು ಜಲ್ದಿ ಉತ್ಸವ, ದೇವೀ ಉತ್ಸವ ಮತ್ತು ಆರತಿ, ಅಮ್ಮನವರ ಬ್ರಹ್ಮರಥೋತ್ಸವ, ದೇವಿಯ ಸಿಡಿ ಉತ್ಸವ, ದೇವಿ ಗುಡ್ಡ ಇಳಿಯುವುದು, ಭರಮಗಿರಿಯ ಕೆರೆ ಹಿಂಭಾಗದಲ್ಲಿ ದೊಡ್ಡೆಡೆ ಸೇವೆ ಮುಗಿಸಿಕೊಂಡು ಗುಡ್ಡ ಹತ್ತುವುದು, ಮತ್ತು ಮಂಗಳವಾರ ಚಪ್ಪರ ಇಳಿಸುವ ಶಾಸ್ತ್ರೋಕ್ತ ಸುಂದರವಾದ ಕಾರ್ಯಗಳು - ಹೀಗೆ ಜರುಗುತ್ತವೆ. ಇಲ್ಲೂ ಕೂಡ ತೇರನ್ನು ಎಳೆಯುವ ಸಂದರ್ಭದಲ್ಲಿ ಭಕ್ತರು ಬಾಳೆಹಣ್ಣು ಮತ್ತು ಪನ್ನೀರಿನ ಎಲೆಯನ್ನು ರಥಕ್ಕೆ ಎಸೆದು ನಮಸ್ಕರಿಸುತ್ತಾರೆ.

ಮೈಸೂರಿನ ಕೆಂಪ ನಂಜಮ್ಮಣ್ಣಿ ವಾಣಿವಿಲಾಸರವರು ವೇದಾವತಿ ನದಿಗೆ ಅಡ್ಡಲಾಗಿ ಎರಡು ಬೆಟ್ಟಗಳ ನಡುವೆ ಸುಂದರವಾದ ಅಣೆಕಟ್ಟನ್ನು ಇಲ್ಲಿ ಕಟ್ಟಿಸಿದ್ದಾರೆ. ೧೮೯೮ ರಿಂದ ೧೯೦೭ ರವರೆಗೆ ನಡೆದ ಕಾಮಗಾರಿಗೆ ಅಂದು ೪೫ ಲಕ್ಷ ರೂ ವ್ಯಯಿಸಲಾಗಿತ್ತು. ಅದಕ್ಕಾಗಿ ರಾಜಮನೆತನ ತಮ್ಮ ಬಂಗಾರವನ್ನು ಒತ್ತೆ ಇಟ್ಟಿದ್ದರು. ದಿವಾನ್ ಶೇಷಾದ್ರಿ ಅಯ್ಯರ್ ಕಾರ್ಯವನ್ನು ಆರಂಭಿಸಿದರು. ಇದು ಮೈಸೂರಿನ ಕೆ.ಆರ್.ಎಸ್‌ಗಿಂತ ಎತ್ತರವಾಗಿದೆ. ೩೦ ಟಿ. ಎಂ. ಸಿ. ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿರುವ ಈ ಆಣೆಕಟ್ಟು ಹಿರಿಯೂರು, ಹೊಸದುರ್ಗ, ಚಿತ್ರದುರ್ಗ, ಚೆಳ್ಳ ಕೆರೆ ತಾಲ್ಲೂಕುಗಳಿಗೆ ಕುಡಿಯಲು ಮತ್ತು ಕೃಷಿಕಾರ್ಯಕ್ಕೆ ನೀರನ್ನು ಒದಗಿಸುತ್ತಿದೆ. ಶತಮಾನದ ಹಳೆಯ ಈ ಅಣೆಕಟ್ಟು ಶತ ಮೈಲುಗಳ ಪ್ರದೇಶಕ್ಕೆ ಆಸರೆಯಾಗಿದೆ. ೧೯೩೩ ರಲ್ಲಿ ತುಂಬಿದ್ದ ಈ ಅಣೆಕಟ್ಟು ಮತ್ತೆ ಈ ವರ್ಷ (೨೦೨೨) ಸುಮಾರು ೮೯ ವರ್ಷಗಳ ನಂತರ ತುಂಬಿ ತುಳುಕುತ್ತಿದ್ದು ಜನರಿಗೆ ಆನಂದವನ್ನು ತಂದಿದೆ. ಪ್ರವಾಸಿಗರ ಮತ್ತು ಚಲನಚಿತ್ರದವರ ಮನಸ್ಸನ್ನು ಆಕರ್ಷಿಸಿ ಅಲ್ಲಿಗೆ ಕರೆಯುತ್ತಿರುತ್ತದೆ ಈ ಪ್ರದೇಶ. ಅಲ್ಲಿಯೇ ಬೆಟ್ಟದ ಮೇಲಿರುವ ಪ್ರವಾಸಿ ಮಂದಿರಕ್ಕೆ ವಾಹನದಲ್ಲೇ ಹೋಗಬಹುದು ಮತ್ತು ಅಲ್ಲಿ ಉಳಿದುಕೊಳ್ಳಬಹುದು. ಈ ಸುಂದರ ಪರಿಸರ, ಪರಿಸರ ಪ್ರೇಮಿಗಳ ಸ್ವರ್ಗವಾಗಿದೆ. ಚಿರತೆ, ಕರಡಿ ಮುಂತಾದ ಕಾಡು ಪ್ರಾಣಿಗಳ ದರ್ಶನವೂ ಆಗಾಗ ಆಗುತ್ತಿರುತ್ತದೆ.

## ಉದ್ಭವ ಲಿಂಗ - ಹಾಲು ರಾಮೇಶ್ವರ

ಇಲ್ಲಿಂದ ಮುಂದಕ್ಕೆ ಸ್ವಲ್ಪ ದೂರದಲ್ಲಿಯೇ ಅಂದರೆ ೨೭ ಕಿ. ಮೀ ನಲ್ಲಿ ಬರುವ ಮತ್ತೊಂದು ಅದ್ಭುತ, ಪವಾಡ, ಪುಣ್ಯ, ತೀರ್ಥಕ್ಷೇತ್ರವೇ ಈ ಹಾಲುರಾಮೇಶ್ವರ ಅಥವ ವರವ ಕೊಡುವ ಕೊಳ ಅಥವಾ ಬಾವಿ ಕ್ಷೇತ್ರ. ಇದು ಹೊಸದುರ್ಗ ತಾಲ್ಲೂಕಿನ ಒಂದು ಸುಂದರವಾದ ಹಳ್ಳಿ. ಚಿತ್ರದುರ್ಗದಿಂದ ೬೦ ಮತ್ತು ಬೆಂಗಳೂರಿನಿಂದ ೧೯೦ ಕಿ.ಮೀ. ದೂರದಲ್ಲಿದೆ. ಚಿತ್ರದುರ್ಗವನ್ನು ಆಳಿದ ಬಲಿಷ್ಠ ನಾಯಕ  ಮದಕರಿ ನಾಯಕ ಹುಟ್ಟಿದ ಜಾನಕಲ್ ಎಂಬ ಹಳ್ಳಿಯ ಬಳಿ ಇದೆ. ಆತ ಮುಂದೆ ಚಿತ್ರ ದುರ್ಗಕ್ಕೆ ಹೋಗಿ ಹೈದರಾಲಿ ಮತ್ತು ಟಿಪ್ಪುವನ್ನು ಎದುರಿಸಿ ಹೋರಾಡಿದ್ದು ಇತಿಹಾಸ.

ಪೌರಾಣಿಕ ಕತೆಯ ಪ್ರಕಾರ ಶ್ರೀರಾಮಚಂದ್ರ ಇಲ್ಲಿಗೆ ಬಂದಾಗ ಈ ಸ್ವಯಂಭೂ ಲಿಂಗದ ಪೂಜೆಯನ್ನು ಮಾಡಿದ್ದನಂತೆ. ಆತ ಪೂಜಿಸಿದ ಲಿಂಗವೇ ರಾಮೇಶ್ವರ ಲಿಂಗವಾಯಿತು. ಆ ದೇವಾ


ಹಾಲುರಾಮೇಶ್ವರ

ಲಯದ ಹಿಂದೆಯೇ ಒಂದು ಚಿಕ್ಕ ಗುಡಿಯಿದ್ದು ಅಲ್ಲಿ ಗಂಗೆಯು ಭೂಮಿಯಿಂದ ಚಿಮ್ಮಿ ಬರುತ್ತಿದ್ದಾಳೆ ಎಂಬ ಪ್ರತೀತಿಯಿದೆ. ಅಲ್ಲಿ ನೆಲೆಸಿದ್ದ ವಾಲ್ಮೀಕಿ ಮಹರ್ಷಿಯ ಪತ್ನಿ ಸುದತಿ ದೇವಿ ಒಮ್ಮೆ ಕಾಶಿಯಲ್ಲಿ ಗಂಗಾಮಾತೆಗೆ ಒಂದು ಚಿನ್ನದ ಆಭರಣವನ್ನು ಬಾಗಿನ ರೂಪದಲ್ಲಿ ಅರ್ಪಿಸಿದ್ದಳಂತೆ. ಅದು ಈ ಊರಿನ ಹುತ್ತದಲ್ಲಿ ಸಿಕ್ಕಿತಂತೆ. ಗಂಗೆಯೇ ಇಲ್ಲಿ ಚಿಮ್ಮಿ ಬರುತ್ತಿರುವುದನ್ನು ಕಂಡು ವಾಲ್ಮೀಕಿ ಮಹರ್ಷಿಗಳು, ನೀನು ಇಲ್ಲಿ ನೆಲೆಸಿ ಭವಿಷ್ಯದಲ್ಲಿ ಇಲ್ಲಿಗೆ ಬರುವ ಭಕ್ತರಿಗೆ ಪ್ರಸಾದವನ್ನು ನೀಡು ಎಂದರು. ಹಾಲಿನ ಬಣ್ಣ ದಿಂದ ಉದ್ಭವಿಸುವ ಗಂಗೆಯಲ್ಲಿ ಪ್ರಸಾದ ತೇಲಿ ಬರುವುದು ಇಲ್ಲಿಯ ಪವಾಡ. ಅದಕ್ಕೆ ಈ ಸ್ಥಳವನ್ನು ಹಾಲು ರಾಮೇಶ್ವರ ಎಂದು ಕರೆಯುವರು. ಈ ಕ್ಷೇತ್ರೋದ್ಭವಕ್ಕೆ ಕಾರಣೀಭೂತಳಾದ ಸುದತಿ ದೇವಿಯ ವಿಗ್ರಹವೂ ಇಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ.

ಭಕ್ತರು ಪಕ್ಕದ ಪುಷ್ಕರಿಣಿಯಲ್ಲಿ ಸ್ನಾನವನ್ನು ಮಾಡಿ, ದೇವಾಲಯಕ್ಕೆ ಬರುತ್ತಾರೆ. ಅಲ್ಲಿಗೆ ಬಂದು ಗಂಗಾದೇವಿಗೆ ನಮಸ್ಕರಿಸಿ, ಆಕೆಗೆ ಪೂಜೆಯನ್ನು ಸಲ್ಲಿಸಿ, ಆಕೆಯ ಪಕ್ಕದಲ್ಲಿ ಕುಳಿತು ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿ, ಕಾಯುತ್ತಾ ಕೂರಬೇಕು. ಆಕೆಯ ಕೃಪೆಯಿಂದ ಅವರ ಪ್ರಾರ್ಥನೆ ನೆರವೇರುವುದಾದರೆ, ನೀರಿನ ಒಳಗಿಂದ, ಬಾಳೆಹಣ್ಣು, ಹೊಂಬಾಳೆ, ಮೊಸರನ್ನ, ಹೂವು, ಬಾಸಿಂಗ, ಕೆಲವು ಬಾರಿ ಲೋಹದ ವಸ್ತು ಗಳು, ತೊಟ್ಟಿಲು, ಮೂರ್ತಿಗಳು, ಸಾಲಿಗ್ರಾಮ, ಎಲೆಅಡಿಕೆ ಮುಂತಾದ ವಸ್ತುಗಳು ಎದ್ದುಬರುತ್ತವೆ. ಪೂಜಾರಿ ಅವುಗಳನ್ನು ಭಕ್ತರಿಗೆ ಕೊಟ್ಟು ಅವರ ಪ್ರಾರ್ಥನೆಯ ಫಲದ ಅರ್ಥವನ್ನು ತಿಳಿಸುತ್ತಾರೆ. ಮತ್ತೊಬ್ಬರ ಪ್ರಸಾದವನ್ನು ತೆಗೆದುಕೊಳ್ಳಲು ಹೋದರೆ ಅದು ಅವರಿಗೆ ದೊರಕದೆ ಮತ್ತೆ ನೀರಿನಲ್ಲಿ ಮುಳುಗಿ ಹೋಗುತ್ತದೆ. ಒಬ್ಬರ ಪ್ರಾರ್ಥನೆ ಫಲಿಸದಿದ್ದಲ್ಲಿ ಸಾಸಿವೆ, ಕಲ್ಲು, ಮಣ್ಣು ಮುಂತಾದ ಅನುಪಯುಕ್ತ ವಸ್ತುಗಳು ಎದ್ದು ಬರುತ್ತವೆ.

ಅಲ್ಲಿಗೆ ನಾವು ಹೋದಾಗ ಹಲವರು ಕುಳಿತುಕೊಂಡಿದ್ದು ತಮ್ಮ ಪ್ರಾರ್ಥನೆಯನ್ನು ನಡೆಸುತ್ತಿದ್ದರು. ಒಂದಿಬ್ಬರು ಎದ್ದು ಹೊರಟು ಹೋದ ಮೇಲೆ ಅಲ್ಲಿಯೇ ಒಬ್ಬ ಮಹಿಳೆ ಕುಳಿತು, ಏಕದೃಷ್ಟಿಯಿಂದ ಗಂಗೆಯನ್ನು ನೋಡುತ್ತಿದ್ದಳು. ಆಗ ಇದ್ದಕ್ಕಿದ್ದಂತೆಯೇ ಒಂದು ಹಳದಿ ದಾರ ಮತ್ತು ಅದರ ಹಿಂದೆಯೆ ಹೊಂಬಾಳೆ ಎದ್ದು ಬಂತು. ಪೂಜಾರಿಗಳು ಆಕೆಯನ್ನು ಕೇಳಿದಾಗ, ಆಕೆ ತನ್ನ ಮಗಳ ಮದುವೆಯ ಬಗ್ಗೆ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಳೆಂದು ಹೇಳಿದಳು. ಅದಕ್ಕೆ ಪೂಜಾರಿಗಳು ಅದನ್ನು ಆಕೆಯ ಕೈಗೆ ಕೊಟ್ಟು, ''ಶುಭವಾಗುತ್ತದೆ. ಇದನ್ನು ಮನೆಯಲ್ಲಿಟ್ಟು ಮೂರುದಿನಗಳ ಕಾಲ ಪೂಜೆ ಮಾಡಿ'' ಎಂದರು. ನಂತರ ಆಕೆ ಮತ್ತೆ ತನ್ನ ಮಗನ ಕೆಲಸದ ಬಗ್ಗೆ ಪ್ರಾರ್ಥನೆಯನ್ನು ಆರಂಭಿಸಿ ಒಂದೆರೆಡು ನಿಮಿಷದಲ್ಲಿಯೇ ಯಶಸ್ಸು ದೊರಕುತ್ತದೆಂದು ಮತ್ತೆ ಹೊಂಬಾಳೆ ತೇಲಿ ಬಂತು.

ನಮ್ಮ ಜೊತೆಯಲ್ಲಿ ಬಂದ ಸ್ವಾಮಿಗಳೊಬ್ಬರು ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿ, ನೂರೆಂಟು ಜಪ ಮಾಡುವುದರ ಒಳಗೆ ಬಾಳೆಹಣ್ಣು ಬರಲಿ ಎಂದೂ, ಜಪ ಮುಗಿದ ಮೇಲೆಯೂ ಬರದಿದ್ದರೆ ಫಲ ಇಲ್ಲವೆಂದು ಭಾವಿಸುವುದಾಗಿ ಪ್ರಾರ್ಥಿಸಿ ತಮ್ಮ ಜಪವನ್ನು ಆರಂಭಿಸಿದರು. ಅವರ ಜಪ ಮುಗಿಯುತ್ತಾ ಬಂದರೂ ಫಲ ಬರಲಿಲ್ಲವೆಂದು ಭಾವಿಸಿ, ಎಲ್ಲಾ ನಿನ್ನಿಚ್ಛೆ ಎನ್ನುತ್ತಿದ್ದಂತೆಯೇ ಬಾಳೆಹಣ್ಣು ತೇಲಿಬಂತು. ಪೂಜಾರಿಗಳು ಅದನ್ನು ಎತ್ತಿಕೊಟ್ಟು ಹೇಳಿದರು, ''ನಿಮ್ಮ ಪ್ರಾರ್ಥನೆಗೆ ಪೂರ್ಣಫಲ ಬಂದಿದೆ ತೆಗೆದುಕೊಳ್ಳಿ'' ಎಂದು. ಇದನ್ನು ಕಣ್ಣಾರೆ ಕಂಡ ನಮಗೆ ಆಶ್ಚರ್ಯವಾಯಿತು.

ಈ ಉದ್ಭವಗಂಗೆಯಿಂದಾಗಿ ಈ ಪ್ರದೇಶವು ಪ್ರಸಿದ್ಧ ವಾಗಿದೆ. ಈ ದೇವಾಲಯವು ಎರಡು ಭಾಗದಲ್ಲಿದೆ. ಒಂದು ಪ್ರವೇಶದ್ವಾರದಲ್ಲಿ ಮತ್ತೊಂದು ಹಿಂಭಾಗದಲ್ಲಿ. ಮುಖ್ಯ ದೇವತೆ ಶಿವ ಅಥವಾ ಹಾಲುರಾಮೇಶ್ವರ ಆದರೆ ಪ್ರಸಿದ್ಧಿಯು ಗಂಗಾಮಾತೆಯ ಪ್ರಸಾದ -ಪವಾಡಕ್ಕೆ. ಈ ಪವಾಡವು ಹಲವು ದಶಕಗಳಿಂದಲೂ ನಡೆಯುತ್ತಾ ಬರುತ್ತಿದೆ. ಹಿಂದೆ ಮೈಸೂರಿನ ಮಹಾರಾಜರುಗಳೂ ತಮ್ಮ ಕುಟುಂಬ ಸಮೇತವಾಗಿ ಬಂದು ಪೂಜೆಯನ್ನು ಸಲ್ಲಿಸುತ್ತಿದ್ದರಂತೆ. ಮಕ್ಕಳಿಲ್ಲದ ಅವರ ಪ್ರಾರ್ಥನೆ ಇಲ್ಲಿ ನೆರವೇರಿ, ಅವರಿಗೆ ಮಗುವಾದ್ದರಿಂದ ಜನರು ಇಲ್ಲಿಗೆ ಹೆಚ್ಚಾಗಿ ಬರಲಾರಂಭಿಸಿದರು ಎಂದು ಜನ ಹೇಳುತ್ತಾರೆ.

ದೇವಾಲಯವು ಬೆಳಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೧ ಹಾಗೂ ಸಾಯಂಕಾಲ ೪ ರಿಂದ ರಾತ್ರಿ ೯ ರವರೆಗೆ ತೆರೆದಿರು ತ್ತದೆ. ಕರ್ನಾಟಕದ ಮೂಲೆಮೂಲೆಗಳಿಂದಲೂ ಜನರು ಇಲ್ಲಿಗೆ ಬಂದು ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿ ಭಗವತಿಯ ಆಶೀರ್ವಾದವನ್ನು ಬೇಡುತ್ತಾರೆ. ಇತ್ತೀಚೆಗೆ ಹಳೆಯ ದೇವಾಸ್ಥಾನವನ್ನು ಕೆಡವಿ ನೂತನವಾದ ದೇವಾಲಯವನ್ನು, ಭಕ್ತರು ಉಳಿದುಕೊಳ್ಳಲು ವ್ಯವಸ್ಥೆಯನ್ನು ಮಾಡಲು ತೊಡಗಿದ್ದಾರೆ. ಹೊಸದಾದ ಪುಷ್ಕರಣಿಗಳು ನಿರ್ಮಾಣವಾಗುತ್ತಿವೆ. ಇದರಿಂದ ಹಳೆಯ ದೇವಾಲಯದ ಆ ಒಂದು ಭವ್ಯತೆ ಮತ್ತು ಆವಿರ್ಭಾವದ ಪ್ರಭಾವ ಕಡಿಮೆಯಾಗುತ್ತಿದೆ ಎನ್ನುವುದು ಸುತ್ತಮುತ್ತಲಿನ ಜನರ ಅಭಿಪ್ರಾಯ.

ಇದನ್ನೆಲ್ಲಾ ಕಂಡ ಮೇಲೆ ನಾವು ಮೊದಲು ಓದಿದ ಸ್ವಾಮಿ ವಿವೇಕಾನಂದರ ವಾಕ್ಯದ ಪ್ರತಿಯೊಂದು ಅಕ್ಷರವೂ ಸತ್ಯಸ್ಯ ಸತ್ಯವೆಂದು ಅರಿವಾಗದಿರದು. ಸಾಧುಸಂತರ, ಅನುಭಾವಿಗಳ, ದೈವ ಭಕ್ತರ ನೆಲೆವೀಡು ಭಾರತ. ಶ್ರದ್ಧೆಯ ತವರೂರು ಈ ನೆಲ. ಧರ್ಮದಲ್ಲೇ ಹುಟ್ಟಿ, ಧರ್ಮದಲ್ಲೇ ಬೆಳೆದು, ಧರ್ಮದಲ್ಲೇ ದುಡಿದು, ಧರ್ಮದಲ್ಲೇ ಜೀವಿಸಿ, ಧರ್ಮವನ್ನೇ ಉಸಿರಾಗಿಸಿಕೊಂಡು ಕೊನೆಗೆ ಧರ್ಮದಲ್ಲೇ ತಮ್ಮ ಜೀವನದ ಅಂತ್ಯವನ್ನು ಕಾಣುವ ಆಸ್ತಿಕ ಜೀವರ ತೀರ್ಥಕ್ಷೇತ್ರವೀ ಭಾರತವೆಂದು ಅರಿವಿಗೆ ಬಾರದಿರದು ಅಲ್ಲವೆ?

ಜೈ ಭಾರತಮಾತೆ.